**ಓ.ಎಸ್.:405/17**

**ಡಿ. ಡಬ್ಲ್ಯೂ:1**

ದಿನಾಂಕಃ 14-06-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ವಕೀಲರಾದ **ಶ್ರೀ . ವಿ.ಎ.ಸಿ ರವರಿಂದ**

ಈ ದಾವೆಯನ್ನು ಯಾರು ಮಾಡಿರುತ್ತಾರೆ ಅಂದರೆ ಸಾಕ್ಷಿ ನಾನು ಮಾಡಿರುತ್ತೇನೆ ಎನ್ನುತ್ತಾರೆ. ನನ್ನ ತಂದೆ ಹೆಸರು ನಾಗಪ್ಪ ಮತ್ತು ತಾಯಿ ಹೆಸರು ಯಲ್ಲವ್ವ ಇರುತ್ತದೆ. ನನ್ನ ತಂದೆ ಯಾವಾಗ ಮರಣ ಹೊಂದಿರುತ್ತಾರೆಂದು ನನಗೆ ನೆನಪಿರುವುದಿಲ್ಲ. ನನ್ನ ತಾಯಿ ಮರಣ ಹೊಂದಿ 5 ವರ್ಷ ಆಗಿರುತ್ತದೆ. ನನ್ನ ತಂದೆ ತಾಯಿಗೆ ನಾನು, ಗಂಗವ್ವ, ಬಾಳವ್ವ, ಫಕೀರವ್ವ, ಉದ್ದವ್ವ, ಕರೆವ್ವ ಮತ್ತು ಹೊನ್ನವ್ವ ಎಂಬ 7 ಜನ ಹೆಣ್ಣು ಮಕ್ಕಳು ಮತ್ತು ಶಿವಪ್ಪ ಎಂಬ ಒಬ್ಬ ಗಂಡು ಮಗ ಇರುತ್ತಾರೆ. ಬಾಳವ್ವ ಮಗುವಿದ್ದಾಗಲೇ ಮರಣ ಹೊಂದಿರುತ್ತಾಳೆ ಅಂದರೆ ಸರಿ. ಗಂಗವ್ವನ ಗಂಡ ಬಾಳಪ್ಪ ಮತ್ತು ಅವರ ಮಗ ಸತ್ತೆಪ್ಪ ಮರಣ ಹೊಂದಿರುತ್ತಾರೆ ಅಂದರೆ ಸರಿ. ಸತ್ತೆಪ್ಪನ ಹೆಂಡತಿ ವಾದಿ ಸಾಂವಕ್ಕ ಅಂದರೆ ಸರಿ. ನನ್ನ ತಂದೆಗೆ ಗೋಕಾಕನಲ್ಲಿ ಎರಡು ಮನೆ ಒಂದು ಜಮೀನು ಇರುತ್ತದೆ ಅಂದರೆ ಸರಿ. ಅರಭಾವಿಯ ಸರ್ವೆ ನಂ.15/12 ಹಿರಿಯರ ಆಸ್ತಿ ಅಲ್ಲ ಅಂದರೆ ಸರಿ. ನಮ್ಮ ತಂದೆಯ ಆಸ್ತಿಯಲ್ಲಿ ನನಗೂ, ನನ್ನ ಅಕ್ಕ ತಂಗಿಯರಿಗೂ ಮತ್ತು ತಮ್ಮನಿಗೂ ಹಕ್ಕು ಇರುತ್ತದೆ ಅಂದರೆ ಸರಿ. ಮರಣ ಹೊಂದಿದ ನನ್ನ ಅಕ್ಕ ತಂಗಿಯರು ಮತ್ತು ತಮ್ಮನ ಮಕ್ಕಳಿಗೂ ದಾವಾ ಆಸ್ತಿಯಲ್ಲಿ ಪಾಲು ಇರುತ್ತದೆ ಅಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು ಗೋಕಾಕ.

ಸಾಕ್ಷಿಯ ಸಹಿ